**ಸಾಕ್ಷಿಗೆ ದಿನಾಂಕಃ 17.12.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎನ್.ಡಿ. ವಕೀಲರಿಂದಃ**

ಋಣಭಾರ ಪ್ರಮಾಣ ಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.11 ಎಂದು, ಸರ್ವೆ ನಂ.151/2ರ ಕೈಬರವಣಿಗೆಯ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.12 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ.ಬಿ.ಎಂ.ಎನ್. ವಕೀಲರಿಂದ:**

ನಿ.ಪಿ.1 ರ ಪ್ರಕಾರ ಪಂಚಾಯಿತಿ ಕ್ರಯಪತ್ರವು ಮಾದಯ್ಯ ಬಿನ್ ಭೀಮ ರವರ ಹೆಸರಿನಲ್ಲಿ ಆಗಿರುತ್ತದೆ. ಸದರಿ ಪತ್ರವನ್ನು ಸಣ್ಣಮ್ಮ ಮತ್ತು ಗತ್ತಲೆ ದೇವರಗುಡ್ಡ ರವರು ಬರೆದುಕೊಟ್ಟಿರುತ್ತಾರೆ. ಸದರಿಯವರ ಹೆಸರಿನಲ್ಲಿ ಇರುವ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಮಾದಯ್ಯ ನವರಿಗೆ ಒಟ್ಟು 4 ಜನ ಮಕ್ಕಳು ಅವರಲ್ಲಿ 3 ಜನ ಗಂಡು 1 ಹೆಣ್ಣು ಮಗಳು. ಪುಟ್ಟರಂಗಯ್ಯನವರಿಗೆ ಒಟ್ಟು 3 ಜನ ಮಕ್ಕಳು. ಚಿಕ್ಕಮಾದಯ್ಯನವರಿಗೆ ಮಕ್ಕಳು ಇರಲಿಲ್ಲ. ಪುಟ್ಟಸ್ವಾಮಿ ರವರಿಗೆ ಒಟ್ಟು 3 ಜನ ಮಕ್ಕಳು. ಸದರಿಯವರ ವಾರಸುದಾರರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನಿ.ಪಿ.5 ರಲ್ಲಿ ಮಾದ್ ನ ಮಗ ಮಾದ ಉರುಫ್ ಭೀಮ ಕ್ರಯ ಎಂದು ನಮೂದು ಇದ್ದು, ಕ್ರಯಪತ್ರದ ನೋಂದಣಿ ಸಂಖ್ಯೆ ಅದರ ದಿನಾಂಕ ಮತ್ತು ವಿಸ್ತೀರ್ಣ ನಮೂದು ಇರುವುದಿಲ್ಲ ಎಂದರೆ ಸರಿ. ನಿ.ಪಿ.6 ರ ಪ್ರಕಾರ ಭೋಗ್ಯವನ್ನು ಮಾದ ಉರುಫ್ ಭೀಮ ರವರು ಚೆನ್ನಬಸಮ್ಮ ನವರಿಗೆ ಬರೆದುಕೊಟ್ಟಿರುತ್ತಾರೆ. 1958 ನೇ ಸಾಲಿನ ಕಂದಾಯ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.6 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.7 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

ನಿ.ಪಿ.7 ರಲ್ಲಿ ಸರ್ವೆ ನಂ.151/1, 151/2 ರಲ್ಲಿ ನಂಜಪ್ಪನ ಮಗ ಬಸಪ್ಪ ರೆವಿನ್ಯೂ ಸೇಲ್ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿ.ಪಿ.7 ರ ಪ್ರಕಾರ 1940 ರಲ್ಲಿ

ರೆವಿನ್ಯೂ ಸೇಲ್ ಆಗಿದ್ದರಿಂದ 1958 ರಲ್ಲಿ ಮಾದ ಭೋಗ್ಯ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.8, 9 ಮತ್ತು ನಿ.ಪಿ.12 ರಲ್ಲಿ ನಂಜಪ್ಪನ ಮಗ ಬಸಪ್ಪ ಎಂದು ನಮೂದು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಮಾದಯ್ಯನ ತಂದೆಯ ಹೆಸರು ನಮೂದು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯಲ್ಲಿ ಯಾವ ಆಧಾರದ ಮೇಲೆ ಮಾದಯ್ಯನ ಹೆಸರು ದಾಖಲು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.151/1 ರಿಂದ 4 ಸ್ವತ್ತುಗಳನ್ನು ಬಸಪ್ಪನವರು ರೆವಿನ್ಯೂ ಸೇಲ್ ಮೂಲಕ ಪಡೆದಿದ್ದು, ಅವುಗಳನ್ನು ಪ್ರಶ್ನಿಸಿ, ಅಪೀಲು ಸಲ್ಲಿಸಿರುವುದಿಲ್ಲ. ಹೊನ್ನಪ್ಪನವರಿಗೆ ಆಗಿರುವ ಭೋಗ್ಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ. 1944 ರ ಭೋಗ್ಯಪತ್ರವನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಮ್ಮ ತಾತ ಭೀಮಯ್ಯನಿಗೆ ಒಟ್ಟು 4 ಜನ ಮಕ್ಕಳು. ನಾನು ಭೀಮಯ್ಯನ ಕುಟುಂಕ್ಕೆ ಸೇರಿದವರು ಎಂದು ತೋರಿಸಲು ತಹಸೀಲ್ದಾರ ಕಛೇರಿಯಿಂದ ವಂಶವೃಕ್ಷವನ್ನು ಹಾಜರುಪಡಿಸಿರುವುದಿಲ್ಲ. ಭೀಮ್ಮಯನ ಮಕ್ಕಳು ಮರಣಹೊಂದಿದ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ಹೊರತುಪಡಿಸಿ, ಉಳಿದವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತನ್ನು ನಮ್ಮ ತಂದೆ ನೋಂದಣಿ ಮಾಡಿಸಿದ್ದರು ಎಂದು ಹೇಳಿರುತ್ತೇನೆ. ದಾವಾ ಸ್ವತ್ತು ನೋಂದಣಿ ಆದ ಬಗ್ಗೆ ದಾಖಲು ಇರುತ್ತದೆ ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ.

ನಾನು ಪ್ರತಿವಾದಿಗಳ ವಿರುದ್ಧ ಸಲ್ಲಿಸಿದ್ದ ಕ್ರಿಮಿನಲ್ ಪ್ರಕರಣದಲ್ಲಿ ಪ್ರತಿವಾದಿಗಳು ನಿರಪರಾಧಿ ಎಂದು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.2 ರಲ್ಲಿ 3 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂ.151/1 ರಲ್ಲಿ 1 ಎಕರೆ 11 ಗುಂಟೆ, ಸರ್ವೆ ನಂ.151/2 ರಲ್ಲಿ 1 ಎಕರೆ 13 ಗುಂಟೆ, ಸರ್ವೆ ನಂ.151/3 ಎ ರಲ್ಲಿ 23 ಗುಂಟೆ ನಮೂದು ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರ್ ಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಸ್ವತ್ತುಗಳು ಮಾದಯ್ಯನಿಗೆ ಸೇರಿರುತ್ತದೆ. ಮಾದಯ್ಯನಿಗೆ ಸೇರಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಹಕ್ಕು, ಅಧಿಕಾರ, ಸ್ವಾಧೀನ ಇಲ್ಲದೆ ಇದ್ದರೂ ಕೈಬರವಣಿಗೆಯ ಆರ್.ಟಿ.ಸಿ.ಗಳಲ್ಲಿ ಮಾದಯ್ಯ ಎಂದು ಸೃಷ್ಟಿ ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸುತ್ತಲು

ಕಲ್ಲುಕಂಬದ ಬೇಲಿ ಇರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ 3 ನೇ ಪ್ರತಿವಾದಿಯು ಬಾಳೆ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಅದಕ್ಕೆ ಬೋರ್ ವೆಲ್ ಸಂಪರ್ಕವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಒಂದು ಮನೆ ಇರುತ್ತದೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಸಲ್ಲಿಸುವಾಗ ದಾವಾ ಸ್ವತ್ತಿನ ಖಾತೆ ಮಾದಯ್ಯನ ಹೆಸರಿನಲ್ಲಿ ಇತ್ತು. ನಿ.ಡಿ.6 ರ ಪ್ರಕಾರ ದಾವಾ ಸ್ವತ್ತಿನ ಖಾತೆ ಬಸಪ್ಪನ ಹೆಸರಿನಲ್ಲಿ ಇರುತ್ತದೆ. 2011 ರ ಈಚೆಗೆ ನನ್ನ ಹೆಸರಿನಲ್ಲಿ ಖಾತೆ ಇರುವುದಿಲ್ಲ.

**ಪಾಟೀ ಸವಾಲು : 3 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ತಮ್ಮದೆಂದು ಅಳವಡಿಸಿಕೊಂಡಿರುತ್ತಾರೆ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**